**ಓ.ಎಸ್. ನಂಃ 94/2023**

**ಡಿ.ಡಬ್ಲ್ಯೂಃ 1**

**ದಿನಾಂಕ 17.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಕೆ.ಎಸ್.ಡಿ. ವಕೀಲರಿಂದಃ**

15. ಲಾಲನಹಳ್ಳಿ ಮತ್ತು ಡೋರನಹಳ್ಳಿ ರಸ್ತೆಗಳ ಮುಖಾಂತರ ದಾವಾ ಆಸ್ತಿಗೆ ಹೋಗಬಹುದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಲಾಲನಹಳ್ಳಿ ಅಡ್ಡರಸ್ತೆ ಆಗಿದ್ದು, ಕೇವಲ ಡೋರನಹಳ್ಳಿಯ ರಸ್ತೆಯ ಮುಖಾಂತರ ದಾವಾ ಆಸ್ತಿಗೆ ಹೋಗಬಹುದು ಎಂದು ಸಾಕ್ಷಿಯು ನುಡಿದಿರುತ್ತಾರೆ. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿದ್ದು, ಸದರಿ ಪೋಟೋದಲ್ಲಿ ಕಾಣುತ್ತಿರುವ ಡಾಂಬರು ರಸ್ತೆಯು ದಾವಾ ಆಸ್ತಿಗೆ ಹೋಗುವ ಡೋರನಹಳ್ಳಿ ರಸ್ತೆ ಎಂದು ಹಾಗೂ ಸದರಿ ರಸ್ತೆಯ ಪಕ್ಕದಲ್ಲಿ ಕಾಣುತ್ತಿರುವ ವಾದಿ ನಿಂತಿರುವ ಗದ್ದೆಯು ವಾದಿಗೆ ಸೇರಿದ ಗದ್ದೆ ಎಂದು ಸಾಕ್ಷಿಯು ನೋಡಿ ಒಪ್ಪಿದ್ದು, ಸದರಿ ಪೋಟೋವನ್ನು ನಿಪಿ.8 ಎಂದು, ವಾದಿಯು ನಿಂತಿರುವ ಗದ್ದೆಯ ಭಾಗವನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ನಿಪಿ.8(ಎ) ಗದ್ದೆಯು 30 ½ ಗುಂಟೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.8(ಎ) ಗದ್ದೆಯು 23 ಗುಂಟೆ ಇರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

16. ನಿಪಿ.8(ಎ) ಗದ್ದೆಯ ಸರ್ವೇ ನಂಬರ್ 270/4 ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.8(ಎ) ಗದ್ದೆಯ ಸರ್ವೇ ನಂಬರ್ 270/3 ಎಂದು ಸ್ವತಃ ನುಡಿದಿರುತ್ತಾರೆ. ನಿಪಿ.8(ಎ) ಗದ್ದೆಯ ಸರ್ವೇ ನಂಬರ್ 270/4 ಆಗಿದ್ದು, ಅದರ ವಿಸ್ತೀರ್ಣ 30 ½ ಗುಂಟೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ.8(ಎ) ಗದ್ದೆಯ ಪಕ್ಕದಲ್ಲಿ ಕಾಣುತ್ತಿರುವ ತೆಂಗಿನ ತೋಟ ನನಗೆ ಸೇರಿರುತ್ತದೆ. ಸಾಕ್ಷಿಗೆ ಈಗ ಇನ್ನೊಂದು ಪೋಟೊವನ್ನು ತೋರಿಸಿದ್ದು, ಅದರಲ್ಲಿ ಕಾಣುತ್ತಿರುವ ತೆಂಗಿನ ತೋಟ ತಮಗೆ ಸೇರಿದ್ದು ಎಂದು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.9 ಎಂದು ಗುರುತಿಸಲಾಯಿತು.

17. ಸಾಕ್ಷಿಗೆ ಈಗ ಇನ್ನೊಂದು ಪೋಟೊವನ್ನು ತೋರಿಸಿದ್ದು, ಸದರಿ ಪೋಟೋದಲ್ಲಿ ವಾದಿಯು ನಿಂತಿರುವ ಗದ್ದೆ ತಾನು ವಾದಿಗೆ ದಾನವಾಗಿ ಕೊಟ್ಟ 30 ½ ಗುಂಟೆ ವಿಸ್ತೀರ್ಣದ ಗದ್ದೆ ಎಂದು ನೋಡಿ ಗುರುತಿಸಿದ್ದು, ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ನಾನು ವಾದಿಗೆ ದಾನವಾಗಿ ಕೊಟ್ಟ ನಿಪಿ.10 ರ 30 ½ ಗುಂಟೆ

ವಿಸ್ತೀರ್ಣದ ಗದ್ದೆಯು ನನ್ನ ನಿಪಿ.9 ರ ತೋಟದ ದಕ್ಷಿಣ ದಿಕ್ಕಿನಲ್ಲಿರುತ್ತದೆ. ನಿಪಿ.10 ರ ಗದ್ದೆಯು ಸರ್ವೇ ನಂಬರ್ 270/6 ರಲ್ಲಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.10 ರ ಗದ್ದೆಯು ಸರ್ವೇ ನಂಬರ್ 270/5 ರಲ್ಲಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

18. ನಿಪಿ.10 ರ 30 ½ ಗುಂಟೆ ವಿಸ್ತೀರ್ಣದ ಗದ್ದೆಯ ಪೂರ್ವ ದಿಕ್ಕಿಗೆ ನಾಲಾ ಏರಿ, ಪಶ್ಚಿಮಕ್ಕೆ-ನೀರು ಹರಿಯುವ ಹಳ್ಳ, ದಕ್ಷಿಣಕ್ಕೆ-ತಿಮ್ಮೇಗೌಡರ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ- ಸರ್ವೇ ನಂಬರ್ 270/2 ರ 22 ಗುಂಟೆ ಜಮೀನು ಇದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಸರ್ವೇ ನಂಬರ್ 270/3 ರ 9 ಗುಂಟೆ ಜಮೀನು ಸಹ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

19. ಸರ್ವೇ ನಂಬರ್ 270 ರಲ್ಲಿ ಆದ 6 ಪೋಡುಗಳನ್ನು ಸಹ ರದ್ದು ಪಡಿಸುವಂತೆ ಕೋರಿ ನಾನೇ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ನಾನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ ಸರ್ವೇ ನಂಬರ್ 270 ರಲ್ಲಿ ಆದ 6 ಪೋಡುಗಳನ್ನು ಸಹ ರದ್ದು ಪಡಿಸಿರುತ್ತಾರೆ. ಸದರಿ ರದ್ದತಿ ಆದೇಶವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೇ ನಂಬರ್ 270 ರಲ್ಲಿ ಆದ 6 ಪೋಡುಗಳನ್ನು ರದ್ದು ಪಡಿಸದಿದ್ದರು ಸಹ ರದ್ದು ಪಡಿಸಿರುತ್ತಾರೆ ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

20. ಸರ್ವೇ ನಂಬರ್ 270 ರಲ್ಲಿ ಆದ 6 ಪೋಡುಗಳ ರದ್ದತಿ ಆದೇಶದ ಪ್ರಕಾರ ನಾನು ಎ.ಡಿ.ಎಲ್.ಆರ್ ರವರ ಕಚೇರಿಗೆ ಹೋಗಿ ಮರು ಸ್ಥಳ ಪರಿಶೀಲನೆ ಮಾಡುವಂತೆ ಅರ್ಜಿಯನ್ನು ಕೊಡುವ ಕಾಲಕ್ಕೆ ವಾದಿ ಈ ದಾವೆಯನ್ನು ಹೂಡಿರುತ್ತಾರೆ. ನಾನು ಈ ದಾವೆಯಲ್ಲಿ ಸಲ್ಲಿಸಿದ ತಕರಾರಿನ ಬಗ್ಗೆ ನನಗೆ ಮಾಹಿತಿ ಇದೆ. ಡಿ.ಡಿ.ಎಲ್.ಆರ್ ರವರ ರದ್ದತಿ ಆದೇಶದ ಪ್ರಕಾರ ಪೋಡು ದುರಸ್ಥಿ ಮಾಡಲು ಎ.ಡಿ.ಎಲ್.ಆರ್ ರವರಿಗೆ ಅರ್ಜಿಯನ್ನು ಕೊಟ್ಟಾಗ ವಾದಿ ಈ ದಾವೆಯನ್ನು ಹೂಡಿರುತ್ತಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ.

21. ಸರ್ವೇ ನಂಬರ್ 270/2 ರಲ್ಲಿರುವ 22 ಗುಂಟೆ ಜಮೀನನ್ನು ಹೊರತುಪಡಿಸಿ ನಿಮಗೆ ಬೇರೆ ಜಮೀನಿನ ಮೇಲೆ ಯಾವುದೇ ಹಕ್ಕು ಇಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಸರ್ವೇ ನಂಬರ್ 270/2 ರಲ್ಲಿರುವ 22 ಗುಂಟೆ

ಜಮೀನಿನೊಂದಿಗೆ ವಾದಿಗೆ ನಾನು ದಾನವಾಗಿ ಬರೆದುಕೊಟ್ಟ 30 ½ ಗುಂಟೆ ಜಮೀನಿನಲ್ಲಿಯು ಸಹ ನನಗೆ 2 ½ ಗುಂಟೆ ಜಮೀನು ಇದೆ ಎಂದು ನುಡಿದಿರುತ್ತಾರೆ. ವಾದಿಗೆ ನಾನು ದಾನವಾಗಿ ಬರೆದುಕೊಟ್ಟ 30 ½ ಗುಂಟೆ ಜಮೀನಿನಲ್ಲಿ ನನಗೆ ಸೇರಿರುವ 2 ½ ಗುಂಟೆ ಜಮೀನನ್ನು ನನ್ನ ಹೆಸರಿಗೆ ಬರೆದು ಕೊಡುವಂತೆ ಕೇಳಿ ನಾನು ವಾದಿಗೆ ಯಾವುದೇ ಕಾನೂನು ತಿಳುವಳಿಕೆ ನೋಟಿಸನ್ನು ಕಳುಹಿಸಿರುವುದಿಲ್ಲ ಹಾಗೂ ಅದರ ಸಂಬಂಧ ನಾನು ವಾದಿಯ ವಿರುದ್ಧ ಯಾವುದೇ ದಾವೆಯನ್ನು ಹೂಡಿರುವುದಿಲ್ಲ. ವಾದಿಗೆ ನಾನು ದಾನವಾಗಿ ಬರೆದುಕೊಟ್ಟ 30 ½ ಗುಂಟೆ ಜಮೀನಿನಲ್ಲಿ ನನಗೆ 2 ½ ಗುಂಟೆ ಜಮೀನು ಉಳಿದಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

22. ಸರ್ವೇ ನಂಬರ್ 270/1, ಸರ್ವೇ ನಂಬರ್ 270/3 ಮತ್ತು ಸರ್ವೇ ನಂಬರ್ 270/4 ರ ಆಸ್ತಿಗಳಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಸರ್ವೇ ನಂಬರ್ 270/2 ರಲ್ಲಿ 22 ಗುಂಟೆ ಜಮೀನು ಹಾಗೂ ವಾದಿಗೆ ನಾನು ದಾನವಾಗಿ ಬರೆದುಕೊಟ್ಟ 30 ½ ಗುಂಟೆ ಜಮೀನಿನಲ್ಲಿ ನನಗೆ 2 ½ ಗುಂಟೆ ಜಮೀನು ಇದೆ ಎಂದು ನುಡಿದಿರುತ್ತಾರೆ. ಸರ್ವೇ ನಂಬರ್ 270/2 ರ ಪಶ್ಚಿಮ ದಿಕ್ಕಿಗೆ ದಾವಾ ಆಸ್ತಿ ಇದೆ ಎಂದರೆ ಸರಿ. ಸರ್ವೇ ನಂಬರ್ 270/1, ಸರ್ವೇ ನಂಬರ್ 270/3 ಮತ್ತು ಸರ್ವೇ ನಂಬರ್ 270/4 ರಲ್ಲಿರುವ 23 ಗುಂಟೆ ಜಮೀನನ್ನು ವಾದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ 22 ಗುಂಟೆ ಜಮೀನನ್ನು ನಾನು ಉಳುಮೆ ಮಾಡುತ್ತಿದ್ದೇನೆ ಹಾಗೂ ವಾದಿಯ ಜಮೀನನ್ನು ವಾದಿಯೇ ಉಳುಮೆ ಮಾಡುತ್ತಿದ್ದಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. 2011 ರಲ್ಲಿ ದಾವಾ ಆಸ್ತಿಯನ್ನು ಖರೀದಿಸಿದಾಗಿನಿಂದಲೂ ಇಲ್ಲಿಯವರೆಗೂ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರು ಸಹ ಚೆಕ್ಕುಬಂಧಿಗಳು ತಪ್ಪಾಗಿವೇ ಎನ್ನುವ ನೆಪದಿಂದ ದಾವಾ ಆಸ್ತಿಯನ್ನು ಕಬಳಿಸುವ ಪ್ರಯತ್ನಪಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**